ಹಾರಿಸಲಿಕ್ಕೆ ಅವಕಾಶವಿದೆ. ತಾವು ಏನು ಕಾರ್ಯಕ್ರಮ ಮಾಡುತ್ತೀರಿ ಅದಕ್ಕೆ ರಾಷ್ಟ್ರಧ್ವಜವನ್ನೇ ಉಪಯೋಗಿಸಬಹುದು. ಅದಕ್ಕೆ ಪ್ರತ್ಯೇಕವಾಗಿ ಮಾಡಲಿಕ್ಕೆ ಸಾಧ್ಯವಿಲ್ಲ. ತಾವೇನು ನಾಡಗೀತೆಯ ಬಗ್ಗೆ ಹೇಳಿದಿರಿ, ಅದರ ಸರ್ಕಾರದ ಪರಿಶೀಲನೆಯಲ್ಲಿದೆ ನಾನು ಅದನ್ನು ನೋಡುತ್ತೇನೆ.

ಅಧ್ಯಕ್ಷರು: ಆಯಿತು, ಈಗ ಶಿವಲಿಂಗೇಗೌಡರವರ ಪ್ರಶ್ನೆಗೆ ಏಳು ದಿಮಸಗಳ ಕಾಲಾವಕಾಶ ಕೇಳಿದ್ದಾರೆ. ನೀವು ಶುಕ್ರವಾರ ಉತ್ತರ ಕೊಡಿ.

ಡಾ: ಎ.ಬಿ. ಮಾಲಕರೆಡ್ಡಿ: ಈ ನಾಡಗೀತೆ ವಿಷಯವಾಗಿ ಮಹದೇವ ಪ್ರಸಾದ್‌ರವರು ಪ್ರಸ್ತಾಪಿಸಿದರು. ಕೆಲವರು ಐದೇ stanza ಹಾಡುತ್ತಾರೆ. ಇನ್ನು ಕೆಲವರು ಏಳು, ಹತ್ತು stanza ಹಾಡುವುದನ್ನು ನಾವು ನೋಡುತ್ತಿದ್ದೇವೆ. ಕೆಲವರು ಸಂಪೂರ್ಣವಾಗಿ ಗೀತೆಯನ್ನು 14, 15 stanza ಹಾಡುವುದನ್ನು ನಾನು ನೋಡಿದ್ದೇನೆ. ಒಂದು ಸಲ ಏನಾಯಿತು ಎರಡು ಕಾರ್ಯಕ್ರಮದಲ್ಲಿ ಇಬ್ಬರು ಪೊಲೀಸರು ಮೂರ್ಛೆ ಹೋಗಿ ಬಿದ್ದರು. ಅಷ್ಟು ಅಟೆಂಟಿವ್ ಅಗಿ ಹತ್ತು ಹದಿನೆಂಟು ನಿಮಿಷಗಳ ಕಾಲ ನಿಲ್ಲುವುದಕ್ಕೆ ಆಗುವುದಿಲ್ಲ. ಅದಕ್ಕೆ ಮಾನ್ಯ ಎಸ್.ಎಂ. ಕೃಷ್ಣರವರ ಕ್ಯಾಬಿನೆಟ್‌ನಲ್ಲಿ ಒಂದು ನಿರ್ಧಾರ ತೆಗೆದುಕೊಂಡಿದ್ದರು. ಕೇವಲ ಐದೇದೇ stanza ಗಳನ್ನು ಮಾತ್ರ ಹಾಡಬೇಕು ಮತ್ತು ಅವು ಯಾವ್ಯಾವು ಎಂಬುದನ್ನು ಕೂಡ ಅದರಲ್ಲಿ ಹೇಳಿತ್ತು. ಅದು ಪೂರ್ಣ ಎಲ್ಲಾ ಮಾಯವಾಗಿ ಪೂರ್ಣವಾಗಿ ಉದ್ದಕ್ಕೂ ಹಾಡುತ್ತಾರೆ. ಇದಾದ ನಂತರ ನೇಗಿಲ ಯೋಗಿ ಇದನ್ನೆಲ್ಲಾ ಹಾಡುವುದರಲ್ಲಿ ಪೊಲೀಸರು faint ಆಗಿ ಬಿದ್ದರು. ಒಂದು ಕಾರ್ಯಕ್ರಮದಲ್ಲಿ ಪೊಲೀಸರು ಈ ರೀತಿ faint ಆಗಿ ಬಿದ್ದಾಗ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾಯಿತು. ಅದಕ್ಕೆ ಅದನ್ನು ಸ್ವಲ್ಪ ದಯಮಾಡಿ nationalize ಮಾಡಬೇಕು.

ಅಧ್ಯಕ್ಷರು: ಮಾನ್ಯ ಶಿವಲಿಂಗೇಗೌಡರು, ನಿಮ್ಮ ಪ್ರಶ್ನೆಗೆ ಏಳು ದಿವಸಗಳ ಕಾಲಾವಕಾಶ ಕೇಳಿದ್ದಾರೆ. ಮೂರು ದಿವಸದಲ್ಲಿ ಉತ್ತರ ಕೊಡುತ್ತಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಸಭೆ ಕರೆಯುವುದು ಆರು ತಿಂಗಳಿಗೆ ಒಂದು ಸಾರಿ. ಆರು ತಿಂಗಳಿಗೆ ಒಂದು ಸಾರಿ ಸಭೆ ಕರೆದಿರುವಾಗ ನಾವು ಒಂದು ಪ್ರಶ್ನೆ ಹಾಕಿದರೆ, ಇದಕ್ಕೆ ಉತ್ತರ ಕೊಡುವುದಕ್ಕಾಗುವುದಿಲ್ಲವೆಂದರೆ ಏನು ಅನ್ನಿಸುತ್ತದೆ ಹೇಳಿ.

ಅಧ್ಯಕ್ಷರು: 9ನೇ ತಾರೀಖು ಉತ್ತರ ಕೊಟ್ಟು ಬಿಡಿ. 9ನೇ ತಾರೀಖು ಉತ್ತರ

ಕೊಡುವಂತೆ ಹೇಳಿದ್ದೇನೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಬಹಳ ಮಹತ್ತರವಾದ ಪ್ರಶ್ನೆ ಕೇಳಿದ್ದೇನೆ. ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ಕೈಗಾರಿಕಾ ಬಂಡವಾಳ ಹೂಡಿಕೆದಾರರ ಸಮಾವೇಶ ಎಂದು ಮಾಡಿ ಇಡೀ ಕರ್ನಾಟಕ ರಾಜ್ಯದ ಗಮನ ಸೆಳೆದಿದ್ದಾರೆ. ಅದರ ಪ್ರಗತಿ ಬಗ್ಗೆ ತಿಳಿದುಕೊಳ್ಳುವುದಕ್ಕಾಗಿ ಎಷ್ಟು ಭೂಮಿ ಖರೀದಿ ಮಾಡಿದಿರಿ, ಎಷ್ಟು ಭೂಮಿ ಅಕ್ವೈರ್ ಮಾಡಿದಿರಿ, ಯಾವ ಯಾವ ಇಂಡಸ್ಟ್ರೀಗಳಿಗೆ ಕೊಟ್ಟಿರಿ, ಏನೇನು ಮಾಡಿದಿರಿ, ನಮ್ಮವರೆಲ್ಲಾ ಕೆಲಸಕ್ಕೆ ಹೋದರಾ, ಏನು ಮಾಡಿದರು ಎಂದು ಅಲ್ಲಿ ನಿರುದ್ಯೋಗಿಗಳೆಲ್ಲ ಕಾಯುತ್ತಾ ಕೂತಿದ್ದಾರೆ. ಕೈಗಾರಿಕೆಗಳು ಬರುತ್ತವೆ, ನಾವೆಲ್ಲಾ ಕೆಲಸಕ್ಕೆ ಹೋಗಬೇಕೆಂದು ಕಾಯುತ್ತಿದ್ದಾರೆ.

ಅಧ್ಯಕ್ಷರು: ಸೋಮವಾರದ ದಿವಸ ಉತ್ತರ ಕೊಡುತ್ತಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಉತ್ತರ ಕೊಡದೆ (ಇರುವುದಕ್ಕೆ ಕಾರಣವೇನು? ನಾನೇನು ಕೇಳಬಾರದ ಪ್ರಶ್ನೆ ಕೇಳಿದನಾ? ಏತಕ್ಕೆ ಉತ್ತರ ಕೊಡುತ್ತಿಲ್ಲ. ಕಾರಣವೇನು? ಎಷ್ಟು ಜಮೀನು ಖರೀದಿ ಮಾಡಿದ್ದೀರಿ, ಎಷ್ಟು ಜಮೀನು ಅಕ್ವೈರ್ ಮಾಡಿದ್ದೀರಿ, ಯಾವ ಯಾವ ಜಿಲ್ಲೆಯಲ್ಲಿ ಮಾಡಿದ್ದೀರಿ, ಯಾವ ಯಾವ ಇಂಡಸ್ಟ್ರೀಗಳಿಗೆ ಕೊಟ್ಟಿದ್ದೀರಿ, ಏನೇನು ಇಂಡಸ್ಟ್ರಿಗಳು ಬಂದಿವೆ. ಏನು ಪ್ರಗತಿ ಆಗಿದೆ, ನೀವು ಲ್ಯಾಂಡ್ ಕೊಟ್ಟಿರುವಂತಹವರು ಏನಾದರೂ ಇಂಡಸ್ಟ್ರೀ ಪ್ರಾರಂಭ ಮಾಡಿದ್ದಾರಾ? ಪಕ್ಕದಲ್ಲಿ ಏನಾದರೂ ಮಳಿಗೆಗಳು ಕಟ್ಟಿಕೊಂಡಿದ್ದಾರೋ?

ಅಧ್ಯಕ್ಷರು: ತಾವು ಏನೇ ಕೇಳಿದರೂ ಈಗ ಅವರ ಹತ್ತಿರ ಉತ್ತರ ಇಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಉತ್ತರ ಇಲ್ಲವೆಂದರೆ ಹೇಗೆ?

ಅಧ್ಯಕ್ಷರು: ಸೋಮವಾರ ಉತ್ತು ಕೊಡಿಸುತ್ತೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: 16 ವರೆಗೆನೇ ಅಸೆಂಬ್ಲಿ ನಡೆಯುವುದು ಎಂದು ಹೇಳಿದ್ದಾರೆ. ದಯವಿಟ್ಟು 16 ರೊಳಗೆ ಉತ್ತರ ಕೊಡಿಸಿ.

ಅಧ್ಯಕ್ಷರು: ನಾನು ಸೂಚನೆ ಕೊಟ್ಟಿದ್ದೇನೆ, ಸೋಮವಾರ ದಿವಸ ಉತ್ತರ ಕೊಡುತ್ತಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಸೋಮವಾರದ ದಿವಸ ನನ್ನ ಪ್ರಶ್ನೆ ತೆಗೆದುಕೊಂಡು ದಯವಿಟ್ಟು ನನಗೆ ಉತ್ತರ ಕೊಡಿಸಬೇಕು.